(107)

**ಕರ್ನಾಟಕ ಸರ್ಕಾರ, ಆಯುಕ್ತರ ಕಚೇರಿ, ಶಾಲಾ ಶಿಕ್ಷಣ ಇಲಾಖೆ,**
**ಐವಾನ–ಎ–ಶಾಹಿ ಬಡಾವಣೆ, ಕಲಬುರಗಿ**

ಸಂಖ್ಯೆ ಸಿ2(5) ಸಿ2(3) ಆಡಳಿತ ಪಅ ದೂರು/44/2010–11 2238 ದಿನಾಂಕ 26.12.2023

**ಸುತ್ತೋಲೆ**

ವಿಷಯ: ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪತ್ರಾಂಕಿತ ಅಧಿಕಾರಿಗಳ ಮೇಲಿನ ದೂರಿನ / ಆರೋಪಗಳಿಗೆ ಪ್ರಾಥಮಿಕ / ಇಲಾಖಾ ವಿಚಾರಣೆ ನಡೆಸಿ ವಿಚಾರಣಾ ವರದಿಗಳನ್ನು ಸಲ್ಲಿಸುವಲ್ಲಿ ಆಗುವ ವಿಳಂಬವನ್ನು ತಡೆಗಟ್ಟುವ ಕುರಿತು

ಉಲ್ಲೇಖ: 1)ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ 8 ಎಸ್‌ಡಿಇ 85 ದಿನಾಂಕ 30.12.1985
2)ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 19 ಸೇಇವಿ 2001 ದಿನಾಂಕ 28.06.2001
3)ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 111 ಸೇಇವಿ 2013 ದಿನಾಂಕ 22.10.2013
4)ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 18 ಸೇಇವಿ 2021 ದಿನಾಂಕ 04.10.2021

===

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪತ್ರಾಂಕಿತ ಅಧಿಕಾರಿಗಳ ವಿರುದ್ಧದ ದೂರಿನ / ಆರೋಪಗಳಿಗೆ ಪ್ರಾಥಮಿಕ ವಿಚಾರಣೆ ನಡೆಸಲು / ಇಲಾಖಾ ವಿಚಾರಣೆ ನಡೆಸಿ, ಪೂರ ದಾಖಲೆಗಳೊಂದಿಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ನೀಡಲು ವಿವಿಧ ವೃಂದ/ ಹಂತದ ಅಧಿಕಾರಿಗಳಿಗೆ ಸಾಕಷ್ಟು ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಇಂತಹ ಅಧಿಕಾರಿಗಳು ತಮಗೆ ವೈಯಕ್ತಿಕ ಇಲ್ಲವೇ ನಿರ್ವಹಿಸುವ ಹುದ್ದೆಯ ಪದನಾಮದೊಂದಿಗೆ ನಿರ್ದೇಶಿಸಲಾಗಿದ್ದರೂ ಸಹ ಕಾಲಮಿತಿಯೊಳಗೆ ವರದಿಗಳನ್ನು ಸಲ್ಲಿಸದೇ ಇರುವುದರಿಂದ ಹಲವಾರು ಪ್ರಕರಣಗಳಲ್ಲಿ ಆಪಾದಿತ ಅಧಿಕಾರಿ/ ನೌಕರರು ಶಿಕ್ಷೆಯಿಂದ ತಪ್ಪಿಸಿಕೊಂಡು ಮುಂಬಡ್ತಿ ಸೇರಿ ಇನ್ನಿತರ ಆರ್ಥಿಕ ಸೌಲಭ್ಯಗಳನ್ನು ಮತ್ತು ನಿವೃತ್ತಿ ಸೌಲಭ್ಯಗಳನ್ನು ಪಡೆಯುತ್ತಿರುವುದು ಗಂಭೀರವಾಗಿ ಪರಿಗಣಿಸಲಾಗಿದೆ. ಈ ರೀತಿಯ ವಿಳಂಬ ನೀತಿಯನ್ನು ಅವಲೋಕಿಸಿದಾಗ ತಾವುಗಳು ಪರೋಕ್ಷವಾಗಿ ಆಪಾದಿತ ಅಧಿಕಾರಿ/ ನೌಕರರನ್ನು ರಕ್ಷಿಸಿದಂತಾಗುತ್ತಿದೆ. ಅಲ್ಲದೇ ಸುಮಾರು ವರ್ಷಗಳಿಂದ ಪ್ರಕರಣಗಳು ಬಾಕಿ ಉಳಿದಿರುವುದರಿಂದ ಆಡಳಿತದ ಮೇಲೆ ಕೆಟ್ಟ ಪರಿಣಾಮ ಬೀರುವುದರ ಜೊತೆಗೆ ಪ್ರಕರಣದ ಗಂಭೀರ್ಯತೆಯನ್ನು ಕಳೆದುಕೊಳ್ಳುತ್ತಿದೆ. ಇದನ್ನು ವಿಳಂಬ ನೀತಿ ಅನುಸರಿಸುವ ಅಧಿಕಾರಿಗಳ ಕರ್ತವ್ಯಲೋಪವೆಂದೇ ಪರಿಗಣಿಸಬೇಕಾಗುತ್ತದೆ.

(106)

ಸರ್ಕಾರಿ ಅಧಿಕಾರಿ / ನೌಕರರ್ರ ವಿರುದ್ಧದ ದೂರಿನ ಪ್ರಾಥಮಿಕ ಹಾಗೂ ಇಲಾಖಾ ವಿಚಾರಣೆಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಉಲ್ಲೇಖ (1) ರಿಂದ (4)ರ ವರೆಗಿನ ಸರಕಾರದ ಆದೇಶ/ ಸುತ್ತೋಲೆಗಳಲ್ಲಿ ಮಾರ್ಗಸೂಚಿ ಜಾರಿ ಮಾಡುವುದರ ಜೊತೆಗೆ ಗರಿಷ್ಠ ಕಾಲಮಿತಿಯನ್ನು ಸಹ ನಿಗದಿಪಡಿಸಿದೆ. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 19 ಸೇಇವಿ 2001 ದಿನಾಂಕ 28.06.2021ರನ್ವಯ ಇಲಾಖಾ ವಿಚಾರಣೆ ನಡೆಸಲು ಗರಿಷ್ಠ 04 ತಿಂಗಳು, ಸಿಸಿಎ ನಿಯಮ–12ರಡಿಯ ಪ್ರಕರಣಗಳಿಗೆ ಸಿಸಿಎ ನಿಯಮ–12ರಡಿ ನೋಟೀಸ್ ಸ್ವೀಕೃತವಾದ ದಿನದಿಂದ ಗರಿಷ್ಠ 15 ದಿನಗಳು ಅವಧಿಯಲ್ಲಿ ಸಮಜಾಯಿಸಿ ನೀಡಲು ಅವಕಾಶ ಕಲ್ಪಿಸಲಾಗಿದ್ದು, ಸಮಜಾಯಿಷಿ ಸ್ವೀಕೃತಗೊಳ್ಳದಿದ್ದಲ್ಲಿ ಯಾವುದೇ ಸಮಜಾಯಿಸಿ ಇರುವುದಿಲ್ಲವೆಂದು ಪರಿಭಾವಿಸಿ ಶಿಸ್ತು ಪ್ರಾಧಿಕಾರಿಯು ಮುಂದಿನ ಪ್ರಕ್ರಿಯೆ ಪ್ರಾರಂಭಿಸುವುದೆಂದು ತಿಳಿಸಿರುತ್ತದೆ. ಹಾಗೂ ಪ್ರಾಥಮಿಕ ವಿಚಾರಣೆಗೆ 01 ತಿಂಗಳ ಗರಿಷ್ಠ ಕಾಲಾವಕಾಶ ನೀಡಿರುತ್ತದೆ.

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ 8 ಎಸ್‌ಡಿಇ 85 ದಿನಾಂಕ 30.12.1985ರನ್ವಯ ಆಪಾದಿತ ಸರ್ಕಾರಿ ನೌಕರರ ವಿರುದ್ಧ ನಡೆಸುವ ಪೂರ್ವಭಾವಿ ತನಿಖೆ/ ಇಲಾಖಾ ವಿಚಾರಣೆಗಳು ತನಿಖೆ ಮುಗಿದ ನಂತರ ಶಿಸ್ತು ಪ್ರಾಧಿಕಾರಿವು ಅಂತಿಮ ಆದೇಶ ಹೊರಡಿಸುವ ಪ್ರಕರಣಗಳಲ್ಲಿ ವಿಳಂಭ ಆಗದಂತೆ ಕಾಲಮಿತಿಯೊಳಗೆ ತನಿಖೆಯನ್ನು ಪೂರ್ಣಗೊಳಿಸಲು ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ. ಒಂದು ವೇಳೆ ಸರ್ಕಾರದ ಸುತ್ತೋಲೆ/ ಅಧಿಕೃತ ಜ್ಞಾಪನಗಳಲ್ಲಿನ ಸೂಚನೆಗಳನ್ನು ಉಲ್ಲಂಘಿಸುವ ಅಧಿಕಾರಿಗಳು ತಾವೇ ಇಲಾಖಾ ತನಿಖೆಗೆ ಒಳಪಡಬೇಕಾಗುತ್ತದೆಂದು ತಿಳಿಸಿರುತ್ತದೆ.

ಆದರೆ, ಈ ಕಛೇರಿಯಿಂದ ವಿಚಾರಣೆಗೆ ನೇಮಿಸಿದ ಅಧಿಕಾರಿ / ನೌಕರರ ಮೇಲಿನ ದೂರಿನ ಪ್ರಕರಣಗಳು / ಇಲಾಖಾ ವಿಚಾರಣೆಗಳು ನಿಗದಿತ ಅವಧಿಯಲ್ಲಿ ಪ್ರಾಥಮಿಕ / ಇಲಾಖಾ ವಿಚಾರಣಾ ವರದಿಗಳು ಸ್ವೀಕೃತಿಯಾಗುತ್ತಿಲ್ಲ. ಹೀಗಾಗಿ ಶಿಸ್ತು ಪ್ರಾಧಿಕಾರಿಯು ಆಪಾದಿತ ಅಧಿಕಾರಿ / ನೌಕರರ ವಿರುದ್ಧದ ಆರೋಪಗಳಿಗೆ ಶಿಸ್ತು ಕ್ರಮ ತೆಗೆದುಕೊಳ್ಳುವಲ್ಲಿ ವಿಳಂಭ ಉಂಟಾಗುತ್ತಿದ್ದು, ಇದರಿಂದ ಶಿಸ್ತು ಪ್ರಾಧಿಕಾರಿಯು ದಂಡನೆ ವಿಧಿಸಲು ವಿಳಂಭವಾಗಿ, ನ್ಯಾಯಾಲಯಗಳಿಂದ ವ್ಯತಿರಿಕ್ತ ತೀರ್ಪುಗಳು ಬರುವಂತಾಗಿವೆ.

ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಉಪ ನಿರ್ದೇಶಕರು (ಆಡಳಿತ) / (ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಪ್ರತಿ ವರ್ಷ ತಪಾಸಣೆ / ಮಾರ್ಗದರ್ಶನ ಹಮ್ಮಿಕೊಂಡು ಪಡೆದ ತಪಾಸಣಾ ವರದಿಗಳಿಂದ ಉಪ ನಿರ್ದೇಶಕರು ಕಛೇರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಡಯಟ್‌ಗಳಲ್ಲಿ ಎಲ್.ಪಿ.ಓ./ ಇ– ಕಚೇರಿ ಅಳವಡಿಸಿಕೊಳ್ಳದೇ ಇರುವುದರಿಂದ ಎಲ್.ಪಿ.ಓ./ ಇ– ಕಚೇರಿ ಅಳವಡಿಸಿಕೊಳ್ಳಲು ತಿಳಿಸಲಾಗಿದ್ದರೂ ಇಲ್ಲಿಯವರೆಗೆ ಉಪ ನಿರ್ದೇಶಕರು (ಆಡಳಿತ)/ (ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಎಲ್.ಪಿ.ಓ./ ಇ– ಕಚೇರಿ ಅಳವಡಿಸಿಕೊಳ್ಳದೇ ಇರುವುದು ಗಂಭೀರವಾಗಿ ಪರಿಗಣಿಸಿದೆ.

ಆದುದರಿಂದ ಎಲ್ಲಾ ಕಛೇರಿಗಳಲ್ಲಿ ಎಲ್.ಪಿ.ಓ./ ಇ–ಕಚೇರಿ ಅಳವಡಿಸಿಕೊಳ್ಳಲು, ಎಲ್.ಪಿ.ಓ. / ಇ–ಕಚೇರಿ ಅಳವಡಿಕೊಂಡ ಬಗ್ಗೆ ವರದಿ ಸಲ್ಲಿಸಲು ಹಾಗೂ ಎಲ್ಲಾ ಪ್ರಾಥಮಿಕ / ಇಲಾಖಾ ವಿಚಾರಣೆ

ಪ್ರಕರಣಗಳಿಗೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಸುತ್ತೋಲೆ / ಅಧಿಕೃತ ಜ್ಞಾಪನಗಳಲ್ಲಿ ಉಲ್ಲೇಖಿಸಿರುವಂತೆ ನಿಗದಿತ ಕಾಲಮಿತಿಯೊಳಗೆ ಕಡ್ಡಾಯವಾಗಿ ಪ್ರಾಥಮಿಕ/ ಇಲಾಖಾ ವಿಚಾರಣೆಗಳನ್ನು ನಡೆಸಿ ಶಿಸ್ತು ಪ್ರಾಧಿಕಾರಿಗಳಿಗೆ ಸ್ಪಷ್ಟ ಅಭಿಪ್ರಾಯ ವಿಚಾರಣಾ ವರದಿಗಳನ್ನು ಪೂರಕ ದಾಖಲೆಗಳೊಂದಿಗೆ ಸಲ್ಲಿಸಲು ಸೂಚಿಸಿದೆ.

ಇನ್ನೂ ಮುಂದೆ ಎಲ್ಲಾ ಕಚೇರಿಗಳಲ್ಲಿ ಕಡತಗಳ ವಿಲೇವಾರಿಯ ವಿವರಗಳನ್ನು ಅಂತರ್ಜಾಲದಲ್ಲಿಯೇ ಅವಲೋಕಿಸಿ, ಪರಾಮರ್ಶಿಸಲಾಗುವುದೆಂಬ ಅಂಶವನ್ನು ಸಹ ಗಮನಿಸತಕ್ಕದ್ದು.

2.1.24.

( ಡಾ. ಆಕಾಶ್, ಎಸ್., ಭಾ.ಆ.ಸೇ., )
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

O/C

ಪ್ರತಿಗಳನ್ನು:

(1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು
(2) ವಿಭಾಗದ ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಗತ್ಯ ಮಾಹಿತಿಗಾಗಿ
(3) ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯ ಎಲ್ಲಾ ಉಪ ನಿರ್ದೇಶಕರು (ಆಡಳಿತ) /ಪ್ರಾಂಶುಪಾಲರು, ಸಿ.ಟಿ.ಇ, ಕಲಬುರಗಿ & ಎಲ್ಲಾ ಡಯಟ್‌ಗಳ ಪ್ರಾಂಶುಪಾಲರು
(4) ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
(5) ಕಚೇರಿಯ ಎಲ್ಲಾ ಶಾಖಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
(6) ಕಚೇರಿಯ ಕಾರ್ಯಕ್ರಮಾಧಿಕಾರಿಗಳಿಗೆ ಕೊಡುತ್ತ, ಈ ಸುತ್ತೋಲೆಯನ್ನು ಇಲಾಖೆಯ ಅಧೀಕೃತ ಅಂತರ್ಜಾಲದಲ್ಲಿ ಅಳವಡಿಸಲು ತಿಳಿಸಿದ

ರವಾನಿಸಿದೆ
ದಿನಾಂಕ 02/01/24
ಸಹಿ